**Akashvani: Bangalore**
**National Bulletin In Kannada**
**15.05.2026: 7.35AM**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**15.05.2026: 7.35AM**
********

**ಮುಖ್ಯಾಂಶಗಳು :**

1. ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಆರು ದಿನಗಳ ಪಂಚರಾಷ್ಟ್ರ ಪ್ರವಾಸ; ಇಂದು ಯುಎಇಗೆ ಭೇಟಿ
2. ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆ; ವಿವಿಧ ರಾಷ್ಟ್ರಗಳ ಸಚಿವರು ಹಾಗೂ ನಿಯೋಗದ ಮುಖ್ಯಸ್ಥರೊಂದಿಗೆ ಪ್ರಧಾನಿ ಸಮಾಲೋಚನೆ
3. ಪುಟ್ಟಪರ್ತಿಯಲ್ಲಿಂದು ಏರೋಸ್ಪೇಸ್ ಮತ್ತು ರಕ್ಷಣಾ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿರುವ ಸಚಿವ ರಾಜನಾಥ್ ಸಿಂಗ್
4. ಚಿನ್ನದ ಆಮದು ಪ್ರಮಾಣಕ್ಕೆ ನೂರು ಕೆಜಿ ಮಿತಿ ಹೇರಿದ ಕೇಂದ್ರ ಸರ್ಕಾರ
5. ೧೧ನೇ ಸಂದಾ ವಿಶ್ವಕಪ್; ವುಶು ಮಹಿಳಾ ೫೨ ಕೆಜಿ ವಿಭಾಗದಲ್ಲಿ ಭಾರತದ ಅಪರ್ಣಾ ದಹಿಯಾಗೆ ಚಿನ್ನದ ಪದಕ

*********

ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಯುಎಇ, ನೆದರ್‌ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿ ಸೇರಿದಂತೆ ಒಟ್ಟು ಐದು ರಾಷ್ಟ್ರಗಳ ಆರು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ತಮ್ಮ ಈ ಪಂಚರಾಷ್ಟ್ರ ಭೇಟಿಯ ಮೊದಲ ಚರಣದಲ್ಲಿ ಪ್ರಧಾನಿ, ಇಂದು ಯುನೈಟೆಡ್ ಅರಬ್ ಎಮಿರೇಟ್ಸ್ ತಲುಪಲಿದ್ದು, ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಯೇದ್ ಅಲ್ ನಹ್ಯಾನ್ ಅವರನ್ನು ಭೇಟಿ ಮಾಡಿ, ಉನ್ನತ ಮಟ್ಟದ ಮಾತುಕತೆ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ಉಭಯ ನಾಯಕರು ದ್ವಿಪಕ್ಷೀಯ ವಿಷಯಗಳು ವಿಶೇಷವಾಗಿ ಇಂಧನ ಸಹಕಾರ ಪ್ರಾದೇಶಿಕ ಸ್ಥಿತಿಗತಿ ಹಾಗೂ ಪರಸ್ಪರ ಹಿತಾಸಕ್ತಿಯ ಅಂತಾರಾಷ್ಟ್ರೀಯ ವಿಚಾರಗಳ ಕುರಿತು ಚರ್ಚಿಸಲಿದ್ದಾರೆ. ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಬಗ್ಗೆಯೂ ಸಮಾಲೋಚಿಸಲಾಗುವುದು. ಪ್ರಧಾನಿ ಅವರ ಪ್ರವಾಸದ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ವಿದೇಶಾಂಗ ಸಚಿವಾಲಯದ ಪಶ್ಚಿಮ ವಲಯ ಹೆಚ್ಚುವರಿ ಕಾರ್ಯದರ್ಶಿ ಅಸೀಮ್ ಮಹಾಜನ್, ಭಾರತ ಮತ್ತು ಯುಎಇ ನಡುವಿನ ಸಂಬಂಧದಲ್ಲಿ ಇಂಧನ ವಲಯ ಪ್ರಮುಖ

ಸ್ತಂಭವಾಗಿದೆ. ಕಳೆದ ವರ್ಷ ಭಾರತದ ಕಚ್ಚಾತೈಲ ಅಗತ್ಯತೆಯ ಶೇಕಡ ೧೧ರಷ್ಟನ್ನು ಪೂರೈಸುವ ಮೂಲಕ ಯುಎಇ ಭಾರತದ ನಾಲ್ಕನೇ ದೊಡ್ಡ ತೈಲ ಮೂಲವಾಗಿ ಹೊರಹೊಮ್ಮಿದೆ ಎಂದಿದ್ದಾರೆ. ಇಂಧನ ಭದ್ರತೆಯ ಜೊತೆಗೆ ಭಾರತಕ್ಕೆ ರಫ್ತಾಗುವ ಒಟ್ಟು ಎಲ್‌ಪಿಜಿ ಪೂರೈಕೆಯಲ್ಲಿ ಯುಎಇ ಸುಮಾರು ಶೇಕಡ ೪೦ರಷ್ಟು ಪಾಲನ್ನು ಹೊಂದಿದೆ. ಹೂಡಿಕೆ ಕ್ಷೇತ್ರದಲ್ಲೂ ಭಾರತೀಯ ಕಂಪನಿಗಳು ಯುಎಇಯ ತೈಲ ಸ್ವತ್ತುಗಳಲ್ಲಿ ಗಮನಾರ್ಹ ಹೂಡಿಕೆ ಮಾಡಿವೆ.

*********

ಭಾರತದ ಅಧ್ಯಕ್ಷತೆಯಲ್ಲಿ ಈ ವರ್ಷ ಬ್ರಿಕ್ಸ್ ಒಕ್ಕೂಟ ಬಹುಪಕ್ಷೀಯತೆಯನ್ನು ಬಲಪಡಿಸಲು, ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸಲು ಹಾಗೂ ಆರ್ಥಿಕ ಚೇತರಿಕೆಯ ಸಾಮರ್ಥ್ಯವನ್ನು ವೃದ್ಧಿಸಲು ಒಗ್ಗೂಡಿ ಕೆಲಸ ಮಾಡಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆಯುತ್ತಿರುವ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯ ಹಿನ್ನೆಲೆಯಲ್ಲಿ ತಮ್ಮನ್ನು ಭೇಟಿಯಾದ ವಿವಿಧ ರಾಷ್ಟ್ರಗಳ ವಿದೇಶಾಂಗ ಸಚಿವರು ಹಾಗೂ ನಿಯೋಗದ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿದ ಪ್ರಧಾನಿ, ಉದಯೋನ್ಮುಖ ಆರ್ಥಿಕತೆಗಳ ನಡುವಿನ ಸಹಕಾರವನ್ನು ಹೆಚ್ಚಿಸಲು ಹಾಗೂ ಜಾಗತಿಕ ದಕ್ಷಿಣದ ಆಶೋತ್ತರಗಳಿಗೆ ಧ್ವನಿಯಾಗಲು ಬ್ರಿಕ್ಸ್ ಒಂದು ಪ್ರಮುಖ ವೇದಿಕೆಯಾಗಿ ಹೊರಹೊಮ್ಮಿದೆ ಎಂದು ಹೇಳಿದರು. ಇದಕ್ಕೂ ಮುನ್ನ ಸಭೆಯ ಉದ್ಘಾಟನಾ ಭಾಷಣ ಮಾಡಿದ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ಜಾಗತಿಕ ವ್ಯವಸ್ಥೆಯಲ್ಲಿ ಶಾಂತಿ ಮತ್ತು ಭದ್ರತೆ ಅತ್ಯಂತ ಪ್ರಮುಖ ಅಂಶಗಳಾಗಿವೆ. ಪ್ರಸ್ತುತ ಜಗತ್ತಿನಲ್ಲಿ ನಡೆಯುತ್ತಿರುವ ಸಂಘರ್ಷಗಳು ಸಂವಾದ ಮತ್ತು ರಾಜತಾಂತ್ರಿಕತೆಯ ಮಹತ್ವವನ್ನು ಎತ್ತಿ ತೋರಿಸುತ್ತಿವೆ ಎಂದರು. ತಾಂತ್ರಿಕ ಪ್ರಗತಿಯನ್ನು ಉತ್ತಮ ಆಡಳಿತ ಮತ್ತು ಅಂತರ್ಗತ ಬೆಳವಣಿಗೆಗೆ ಬಳಸಿಕೊಳ್ಳುವಂತೆ ಕರೆ ನೀಡಿದ ಸಚಿವರು, ಭಯೋತ್ಪದನೆ ವಿರುದ್ಧದ ಹೋರಾಟದಲ್ಲಿ ಸಹಕಾರ ಬಲಪಡಿಸುವ ಕುರಿತು ಮಾತನಾಡಿ, ವಿವಿಧ ಸವಾಲುಗಳ ನಡುವೆ ಬ್ರಿಕ್ಸ್ ಒಕ್ಕೂಟ ಜಗತ್ತಿನಲ್ಲಿ ಸ್ಥಿರತೆ ತರುವ ಪಾತ್ರವನ್ನು ವಹಿಸುತ್ತದೆ ಎಂಬ ನಿರೀಕ್ಷೆ ಇದೆ ಎಂದು ತಿಳಿಸಿದರು.

*********

ಆಂಧ್ರಪ್ರದೇಶದ ಶ್ರೀ ಸತ್ಯಸಾಯಿ ಜಿಲ್ಲೆಯ ಪುಟ್ಟಪರ್ತಿಯಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಇಂದು ಹಲವು ಪ್ರಮುಖ ಏರೋಸ್ಪೇಸ್ ಮತ್ತು ರಕ್ಷಣಾ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ವೈಮಾನಿಕ ಅಭಿವೃದ್ಧಿ ಸಂಸ್ಥೆ - ಎಡಿಎಯ ವಿಮಾನ ಜೋಡಣೆ ಮತ್ತು ಹಾರಾಟ ಪರೀಕ್ಷಾ ಕೇಂದ್ರಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ನೂತನ ಕೇಂದ್ರ, ವಿಮಾನಗಳ ಜೋಡಣೆ, ಪರೀಕ್ಷೆ,

ಮೌಲ್ಯೀಕರಣ ಮತ್ತು ಪ್ರಮಾಣೀಕರಣ ಪ್ರಕ್ರಿಯೆಗಳನ್ನು ಚುರುಕುಗೊಳಿಸಲಿದ್ದು, ವಿಶೇಷವಾಗಿ ದೇಶದ ಸುಧಾರಿತ ಮಧ್ಯಮ ಯುದ್ಧ ವಿಮಾನ ಕಾರ್ಯಕ್ರಮದ ಅಭಿವೃದ್ಧಿಗೆ ಹೆಚ್ಚಿನ ವೇಗ ನೀಡಲಿದೆ. ಸಚಿವ ರಾಜನಾಥ್ ಸಿಂಗ್, ಅನಕಾಪಲ್ಲಿಯಲ್ಲಿ ಸ್ಥಾಪನೆಯಾಗಲಿರುವ ಭಾರತ್ ಡೈನಾಮಿಕ್ಸ್ ಲಿಮಿಟೆಡ್‌ನ ಅತ್ಯಾಧುನಿಕ ನೌಕಾ ವ್ಯವಸ್ಥೆಗಳ ಉತ್ಪಾದನಾ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಈ ಘಟಕ ನೌಕಾಪಡೆಗೆ ಅಗತ್ಯವಿರುವ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ತಯಾರಿಸುವಲ್ಲಿ ಪ್ರಮುಖಪಾತ್ರ ವಹಿಸಲಿದೆ.

*********

ದೇಶದ ಆಭರಣ ರಫ್ತು ವಲಯದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದ್ದು, ಮುಂಗಡ ಪರವಾನಗಿ ಯೋಜನೆಯಡಿ ಚಿನ್ನದ ಆಮದು ಮಾಡಿಕೊಳ್ಳುವ ಪ್ರಮಾಣಕ್ಕೆ ಸರ್ಕಾರ ಗರಿಷ್ಠ ೧೦೦ ಕೆಜಿ ಮಿತಿಯನ್ನು ವಿಧಿಸಿದೆ. ಈ ಯೋಜನೆ ಆಭರಣ ರಫ್ತುದಾರರಿಗೆ ಯಾವುದೇ ಸುಂಕವಿಲ್ಲದೆ, ಕಚ್ಚಾವಸ್ತುಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ನೀಡುತ್ತದೆ. ಈವರೆಗೆ ಈ ಯೋಜನೆಯಡಿ ಚಿನ್ನದ ಆಮದಿಗೆ ಯಾವುದೇ ನಿರ್ದಿಷ್ಟ ಮಿತಿ ಇರಲಿಲ್ಲ. ವಿದೇಶಿ ವ್ಯಾಪಾರ ಮಹಾ ನಿರ್ದೇಶನಾಲಯ - ಡಿಜಿಎಫ್‌ಟಿ, ಹೊರಡಿಸಿರುವ ಪ್ರಕಟಣೆಯ ಪ್ರಕಾರ ರಫ್ತು ಪ್ರಕ್ರಿಯೆಯಲ್ಲಿ ಸಮತೋಲನ ಕಾಯ್ದುಕೊಳ್ಳಲು ಮತ್ತು ದೇಶೀಯ ಮಾರುಕಟ್ಟೆಯ ಹಿತದೃಷ್ಟಿಯಿಂದ ನೂರು ಕೆಜಿ ಮಿತಿಯ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವಿಶ್ಲೇಷಿಸಲಾಗಿದೆ. ರಫ್ತುದಾರರು ತಮ್ಮ ಹಿಂದಿನ ಪರವಾನಗಿಯಲ್ಲಿ ನಿಗದಿಪಡಿಸಲಾದ ರಫ್ತು ಹೊಣೆಗಾರಿಕೆಯ ಪೈಕಿ ಕನಿಷ್ಠ ಶೇಕಡ ೫೦ರಷ್ಟನ್ನು ಪೂರೈಸಿದ ನಂತರವಷ್ಟೇ ಮುಂದಿನ ಆಮದು ಪರವಾನಗಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ ಎಂದು ಷರತ್ತು ವಿಧಿಸಿದೆ.

*********

ಐರೋಪ್ಯ ಒಕ್ಕೂಟ ಮಾರುಕಟ್ಟೆಗೆ ಅಕ್ವಾ ಕಲ್ಚರ್ ಅಂದರೆ ಜಲಕೃಷಿ ಉತ್ಪನ್ನಗಳ ರಫ್ತನ್ನು ಮುಂದುವರಿಸಲು ಅನುವು ಮಾಡಿಕೊಡುವ ಪರಿಷ್ಕೃತ ಕರಡು ಪಟ್ಟಿಯಲ್ಲಿ ಭಾರತವನ್ನು ಸೇರಿಸಲಾಗಿದೆ. ಸೆಪ್ಟೆಂಬರ್ ೨೦೨೬ರಿಂದ ಜಾರಿಗೆ ಬರುವಂತೆ ಮಾನವ ಬಳಕೆಯ ಪ್ರಾಣಿ ಮೂಲದ ಉತ್ಪನ್ನಗಳನ್ನು ರಫ್ತು ಮಾಡಲು ಅನುಮತಿ ಇರುವ ದೇಶಗಳ ಪಟ್ಟಿಯಲ್ಲಿ ಈ ಮೊದಲು ಭಾರತವನ್ನು ಕೈಬಿಡಲಾಗಿತ್ತು ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. ಐರೋಪ್ಯ ಆಯೋಗದ ನಿಯಮಾವಳಿಗಳಿಗೆ ಅನುಗುಣವಾಗಿ ಭಾರತ ಕೈಗೊಂಡಿರುವ ಅನುಸರಣಾ ಕ್ರಮಗಳ ಹಿನ್ನೆಲೆಯಲ್ಲಿ ಈ ಪರಿಷ್ಕೃತ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಭಾರತದ

ಸೇರ್ಪಡೆ, ದೇಶದ ಸಮುದ್ರ ಉತ್ಪನ್ನಗಳ ರಫ್ತು ವಲಯಕ್ಕೆ ಅತ್ಯಂತ ಸಕಾರಾತ್ಮಕ ಬೆಳವಣಿಗೆಯಾಗಿದೆ ಎಂದು ತಿಳಿಸಿದೆ.

*********

ಉತ್ತರ ಪ್ರದೇಶದಲ್ಲಿ ಕಳೆದ ೩೬ ಗಂಟೆಗಳಲ್ಲಿ ಸುರಿದ ಭಾರೀ ಮಳೆ, ಬಿರುಗಾಳಿ ಮತ್ತು ಸಿಡಿಲಿನ ಅಬ್ಬರಕ್ಕೆ ೧೧೧ ಮಂದಿನ ಮೃತಪಟ್ಟಿದ್ದು, ೨೦೦ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ರಾಜ್ಯಾದ್ಯಂತ ಮಳೆ ಸಂಬಂಧಿತ ಅವಘಡಗಳು ಸಂಭವಿಸಿರುವ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು, ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ, ಸಮೀಕ್ಷೆ ನಡೆಸುವಂತೆ ನಿರ್ದೇಶಿಸಿದ್ದಾರೆ. ಸಂತ್ರಸ್ತರಿಗೆ ನೀಡಲಾಗುವ ಪರಿಹಾರದ ಕುರಿತು ಪ್ರತಿ ಮೂರು ಗಂಟೆಗೊಮ್ಮೆ ಸ್ಥಿತಿಗತಿಗಳನ್ನು ತಿಳಿಸುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದ್ದಾರೆ. ರಾಜ್ಯದಲ್ಲಿ ಪ್ರಯಾಗ್‌ರಾಜ್, ಭದೋಹಿ, ಮಿರ್ಜಾಪುರ್, ಫತೇಪುರ್ ಮತ್ತು ವಾರಾಣಸಿ ಜಿಲ್ಲೆಗಳು ಮಳೆಯಿಂದಾಗಿ ಅತಿಹೆಚ್ಚು ಹಾನಿಗೊಳಗಾದ ಪ್ರದೇಶಗಳಾಗಿವೆ ಎಂದು ವರದಿಯಾಗಿದೆ.

*********

ಮುಂಬರುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ - ನೀಟ್ ನಡೆಸಲು ಕೈಗೊಳ್ಳಲಾಗಿರುವ ಸಿದ್ಧತೆಗಳ ಕುರಿತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ತಮ್ಮ ನಿವಾಸದಲ್ಲಿ ನಿನ್ನೆ ಸಂಜೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದರು. ನೀಟ್ ಪರೀಕ್ಷೆಯನ್ನು ಯಾವುದೇ ಅಡೆತಡೆ ಇಲ್ಲದೆ ಸುಗಮವಾಗಿ ಮತ್ತು ದಕ್ಷತೆಯಿಂದ ನಡೆಸುವ ನಿಟ್ಟಿನಲ್ಲಿ ವಿವಿಧ ಆಯಾಮಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆಯ ಕಾರ್ಯದರ್ಶಿ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ - ಎನ್‌ಟಿಎಯ ಮಹಾ ನಿರ್ದೇಶಕರು, ಸಿಬಿಎಸ್‌ಇ ಅಧ್ಯಕ್ಷರು, ಕೇಂದ್ರೀಯ ವಿದ್ಯಾಲಯ ಸಂಘಟನೆ ಮತ್ತು ನವೋದಯ ವಿದ್ಯಾಲಯ ಸಮಿತಿಯ ಆಯುಕ್ತರು ಸೇರಿದಂತೆ ಹಲವು ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

*********

ಕೇರಳಂನಲ್ಲಿ, ಶಬರಿ ಮಲೆ ಬೆಟ್ಟದ ದೇವಾಲಯವನ್ನು ನಿನ್ನೆ ಸಂಜೆ ಎಡವಂ ಮಾಸಿಕ ಪೂಜೆಗಾಗಿ ತೆರೆಯಲಾಗಿದೆ. ಭಕ್ತಾಧಿಗಳಿಗೆ ಬೆಳಿಗ್ಗೆ ೫ ಗಂಟೆಯಿಂದಲೇ ದರ್ಶನ ಲಭ್ಯವಿರುತ್ತದೆ ಮತ್ತು ಇದೇ ೧೯ ರಂದು ರಾತ್ರಿ ೧೦ ಗಂಟೆಗೆ ದೇವಾಲಯವನ್ನು ಮುಚ್ಚಲಾಗುತ್ತದೆ. ಯಾತ್ರಿಕರಿಗೆ ಆನ್‌ಲೈನ್ ಮೂಲಕ ವರ್ಚುವಲ್ ಕ್ಯೂ ಬುಕಿಂಗ್ ಕೂಡ ಲಭ್ಯವಿದೆ.

*********

ಮಕಾವುದಲ್ಲಿ ನಿನ್ನೆ ನಡೆದ ೧೧ನೇ ಸಂದಾ ವಿಶ್ವಕಪ್‌ನ ಮಹಿಳೆಯರ ೫೨ ಕೆಜಿ ವಿಭಾಗದಲ್ಲಿ ಭಾರತೀಯ ವುಶು ಆಟಗಾರ್ತಿ ಅಪರ್ಣಾ ದಹಿಯಾ ಚಿನ್ನದ ಪದಕ ಗೆದ್ದಿದ್ದಾರೆ. ಅಪರ್ಣಾ ಅವರು ಫೈನಲ್‌ನಲ್ಲಿ ಹಾಲಿ ವಿಶ್ವ ಚಾಂಪಿಯನ್ ವಿಯೆಟ್ನಾಂನ ಥಿ ಫುವಾಂಗ್ ಎನ್ಗಾ ಎನ್ಗೊ ಅವರನ್ನು ನೇರ ಸೆಟ್‌ಗಳಲ್ಲಿ ಸೋಲಿಸಿದರು. ಮೇ ೧೨ ರಂದು ಪ್ರಾರಂಭವಾದ ಈ ಸ್ಪರ್ಧೆಯಲ್ಲಿ ಇದು ಭಾರತದ ಮೊದಲ ಚಿನ್ನದ ಪದಕವಾಗಿದೆ.

****END****